ಸರಿಸಮಾನಳೇ.? ಜೀವನದುದ್ದಕ್ಕೂ ಅನಾಥಪ್ರಜ್ಞೆ, ಬಡತನದ ಕೀಳರಿಮೆ, ಆಸೆಗಳನ್ನೆಲ್ಲಾ ಅದುಮಿರಿಸಿಕೊಂಡು ಹತಾಶವಾಗಿ ಬಾಳಿ ಬಂದ ತನಗೆ ಅದು ಹೇಗೋ ಈ ಮನೆಯವರ ಕೃಪೆಯಲ್ಲಿ ಇಂಜಿನಿಯರಿಂಗ್ ಮುಗಿಸತೊಡಗಿದ್ದು ಒಂದು ಪವಾಡವಷ್ಟೇ. ತಾನು ಸ್ವಾವಲಂಬಿಯಾಗಿ ನಿಲ್ಲುವ ತನಕ ತನ್ನ ಹೃದಯ, ಬೀಗ ಜಡಿದ ಬಾಗಿಲು ಹೃದಯದ ಕೈಗೆ ಮನಸ್ಸು ಕೊಡದೇ, ಭಾವುಕತೆಗೆ ಸ್ಥಾನವಿಲ್ಲದೇ ಸ್ಥಿತಪ್ರಜ್ಞಳಾಗಿ, ಸದ್ಯಕ್ಕೆ ಕಲಿಕೆಯೊಂದೇ ತನ್ನ ಗುರಿ ಮಾಡಿಕೊಂಡವಳು. ಉದ್ಯೋಗಿಯಾಗಿ ನೆಲೆ ನಿಲ್ಲುವುದು ನನ್ನ ಗಮ್ಯ.ತಾನು ತನ್ನದೇ ಆದ ವ್ಯಕ್ತಿತ್ವ ಕಂಡುಕೊಂಡ ಬಳಿಕವಷ್ಟೇ ಉಳಿದವುಗಳಿಗೆ ತನ್ನ ಆದ್ಯತೆ.. ಇದು ತನ್ನ ನಿಲುವು.. ಅದಕ್ಕೆ ತಾನು ಬದ್ಧಳು...

'ಹಲೋ ಅಪೂರ್ವ.. ಯಾಕೆ ಮೌನವಾಗಿದ್ದೀರ..? ನಾನೇನಾದ್ರೂ ತಪ್ಪು ಮಾತನಾಡಿದೆನಾ? ನಿಮ್ಮನ್ನು ಭೇಟಿ ಮಾಡಿದಾಗಲಿಂದ ನನ್ನ ಮನಸ್ಸು ತುಂಬಾ ನೀವೇ ಆವರಿಸಿಬಿಟ್ಟಿದ್ದೀರಾ' ಆದರ್ಶ ಹೇಳತೊಡಗಿದ್ದನ್ನು ಆಲಿಸದೇ ಅಪೂರ್ವ ಅವನನ್ನು ತಡೆದಳು.

'ಆದರ್ಶ, ದಯವಿಟ್ಟು ನಿಲ್ಲಿಸಿ.. ನನಗೆ ಸದ್ಯಕ್ಕೆ ನನ್ನ ಶಿಕ್ಷಣ ಒಂದೇ ಗುರಿ.. ನನ್ನ ಪರಿಸ್ಥಿತಿ, ನನ್ನ ಮನಸ್ಥಿತಿ ನೀವು ಅರ್ಥ ಮಾಡ್ಕೋತೀರ ಅಂತ ಭಾವಿಸಿದೆ. ಸದ್ಯಕ್ಕೆ ನಾವಿಬ್ರೂ ಕೇವಲ ಸ್ನೇಹಿತರಾಗಿರೋಣ.. ಹಾಗಿದ್ರೆ ಮಾತ್ರ ನಾನು ನಿಮ್ಮ ಹತ್ರ ಮಾತನಾಡ್ತೀನಿ. ಇಲ್ದಿದ್ರೆ..' ಅವಳು ಸಂಪರ್ಕ ಕಡಿಯುವಳೆಂಬ ಕಳವಳದಿಂದ,

'ಸರಿ.. ಸರಿ.. ನಾನೇನೂ ಒತ್ತಾಯ ಮಾಡಲ್ಲ.. ನೀವು ನನ್ನನ್ನು ಸ್ನೇಹಿತನೆಂದಾದ್ರೂ ಪರಿಗಣಿಸ್ತೀರಲ್ಲ.. ಅಷ್ಟು ಸಾಕು' ಎಂದ.

'ನಾನು.. ನಿಮ್ಗೆ ಯಾಕೆ ಕರೆ ಮಾಡಿದೆನೆಂದರೆ ನಿಮ್ಮ ಹತ್ರ ಸೂರ್ಯನ ಬಗ್ಗೆ ಮಾತನಾಡೋದಿತ್ತು' ಅಪೂರ್ವ ನುಡಿದಾಗ, ಆದರ್ಶನ ಉತ್ಸಾಹದ ಬಲೂನಿಗೆ ಸೂಜಿ ಚುಚ್ಚಿದಂತಾಗಿತ್ತು.

'ಸೂರ್ಯನ ಬಗ್ಗೆನಾ? ನಾನು ಅದೇ ಅಂದ್ಕೊಂಡೆ. ನೀವಾಗೇ ಕರೆ ಮಾಡಿದ್ದೀರೆಂದರೆ ಏನೋ ಕಾರಣವಿರಬೇಕು ಅಂತ. ಆದ್ರೆ ಸೂರ್ಯನ ಬಗ್ಗೆ ಅಂತ ತಿಳಿದಿರಲಿಲ್ಲ' ಎಂದ ನಿರಾಶೆಯಿಂದ.

'ನೀವು ಡಾಕ್ಟರ್ ಅಲ್ವಾ.. ಈ ಸಮಸ್ಯೆಗೆ.. ನಿಮ್ಮ ಬಳಿ ಪರಿಹಾರವಿರಬಹುದೆಂದುಕೊಂಡೆ' ಎಂದವಳು ಸೂರ್ಯನ ನಡವಳಿಕೆಯ ಬಗ್ಗೆ ಎಲ್ಲವನ್ನೂ ವಿವರವಾಗಿ ತಿಳಿಸಿದಳು.

'ಅವನಿಗೆ ಯಾವುದಾದರೂ ಕೌನ್ಸಿಲರ್ ಹತ್ರ ಕರ್ಕೊಂಡು ಹೋಗಿ ನಿಯಮಿತವಾಗಿ ಕೌನ್ಸಿಲಿಂಗ್ ಕೊಟ್ರೆ ಅವನ ಮನಸ್ಥಿತಿ ಸ್ಥಿಮಿತಕ್ಕೆ ಬರಬಹುದು. ಆಪ್ತ ಸಲಹೆಯಿಂದ ಮಾತ್ರ ಇದಕ್ಕೆ ಸಮಾಧಾನ ದೊರಕಲು ಸಾಧ್ಯ' ಆದರ್ಶನ ಸಲಹೆ ಅಪೂರ್ವಳಿಗೆ ಮೆಚ್ಚುಗೆಯಾಯಿತು.

'ನಿಮ್ಗೆ ತುಂಬಾ ಥ್ಯಾಂಕ್ಸ್, ನನಗೀಗ ಸಮಾಧಾನವಾಯಿತು. ನಿಮ ಲಿಸ್ಟಲ್ಲಿ ಯಾರಾದ್ರೂ.. ಒಳ್ಳೆ ಕೌನ್ಸಿಲರ್ ಇದ್ದಾರೇನು...?

'ಅದನ್ನೂ ನೀವೇ ಮಾಡ್ತೀರ? ಮಾವನ ಹತ್ರ ಹೇಳಿ' ಅವನ ದನಿಯಲ್ಲಿ ಕಹಿ ಇಣುಕಿತು. ಸೂರ್ಯ ಮತ್ತು ಅಪೂರ್ವ ಹತ್ತಿರವಾಗುವುದನ್ನು ಸಹಿಸುವುದು ಅವನಿಗೆ ಕಷ್ಟವಾಯಿತು.

'ನಾನು ಮಾಡಿದ್ರೆ ತಪ್ಪೇನು? ಸೂರ್ಯ ಅಪ್ಪ ಮಾತಿಗೆ ಈಗ್ಲೂ ಕೆರಳ್ತಾರೆ.. ಇನ್ನೂ ಆಂಟಿಗೆ ಹೊರಗಿನ ಪ್ರಪಂಚ ಅಷ್ಟು ತಿಳಿಯಲ್ಲ.. ನಾನೇ ಕರ್ಕೊಂಡು ಹೋಗ್ತೀನಿ ಬೇಕಾದ್ರೆ.. ನೀವೂ ಬನ್ನಿ.. ನನಗೆ ಸಹಾಯವಾಗುತ್ತೆ..' ಅವಳ ಒಡನಾಟದ ಅಪೇಕ್ಷೆಯಿಂದ ಆದರ್ಶ ಕೂಡಲೇ ಒಪ್ಪಿಗೆ ಸೂಚಿಸಿದ.

'ನನ್ನ ಸೀನಿಯರ್ಸ್ ಹತ್ರ ವಿಚಾರಿಸಿ ಒಳ್ಳೇ ಕೌನ್ಸಿಲರ್ ಅನ್ನು ನೋಡ್ತೀನಿ.. ನಿಮ್ಗೆ ತಿಳಿಸ್ತೀನಿ.. ಆದ್ರೆ ಸೂರ್ಯ ಅವರ ಹತ್ರ ಬರಲು ಒಪ್ತಾನಾ..? ಆ ಸಿಟ್ಟಿಗೆ ಪುನಃ ನಿಮ್ಮ ಮೇಲೆ ಕೈ ಮಾಡಿದ್ರೆ ನಾನಂತೂ ಸಹಿಸೋದಿಲ್ಲ' ಆದರ್ಶ ಅಸಹನೆ ಪ್ರದರ್ಶಿಸಿದ.

'ಅವ್ರಿಗೆ ತಮ್ಮ ವರ್ತನೆಯ ಬಗ್ಗೆ ಪಶ್ಚಾತ್ತಾಪವಿದೆ...ಅವ್ರು ನನ್ನ ಹತ್ರ ಕ್ಷಮೆಯನ್ನೂ ಕೇಳಿದ್ದಾರೆ. ಹಾಗೆಲ್ಲ ಏನೂ ಆಗಲ್ಲ ಬಿಡಿ.. ನೀವು ಚಿಂತೆ ಮಾಡ್ಬೇಡಿ.. ಸೂರ್ಯನನ್ನು ಕರೆ ತರುವ ಜವಾಬ್ದಾರಿ ನನ್ನದು' ಅಪೂರ್ವ ನುಡಿದಾಗ, ಒಂದೇ ಮನೆಯಲ್ಲಿದ್ದು ಅವರಿಬ್ಬರ ನಡುವೆ ಸ್ನೇಹ ಸಲುಗೆ ಮೂಡುತ್ತಿರುವುದನ್ನು ಕಂಡು ಆದರ್ಶ ತಡೆಯದಾದ.

'ಅವ್ನ ಮೇಲೆ ನೀವು ಅಗತ್ಯಕ್ಕಿಂತ ಹೆಚ್ಚಿನ ಆಸಕ್ತಿ ಕೊಡ್ತಿರುವ ಹಾಗಿದೆ. ಆದರ್ಶನ ವ್ಯಂಗ್ಯವರಿತು ಅಪೂರ್ವಳಿಗೆ ನಗು ಬಂದಿತು. 'ನಿಮ್ಗೆ ಅಸೂಯೆ ಆಗ್ತಿದ್ಯ..?' ಎಂದು ಬೇಕೆಂದೇ ಕೆಣಕಿದಳು.

'ಹಾಗೇ ಅಂದುಕೊಳ್ಳಿ.. ಸೂರ್ಯನನ್ನು ಇಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ತೀರ.. ನನ್ನನ್ನು ಅರ್ಥ ಮಾಡಿಕೊಳ್ಳೋದು ಯಾವಾಗ?' ಆದರ್ಶ ಕಸಿವಿಸಿಯಿಂದ ಕೇಳಿದ.

'ಸೂರ್ಯನ ಬಗ್ಗೆ ನಾನು ಕಾಳಜಿ ವಹಿಸುತ್ತಿರುವುದು.. ಅವರಿಗಾಗಿ ಅಲ್ಲ.. ನನ್ನ ಆಶ್ರಯ ನೀಡಿ, ಕಲಿಸಿ ಒಂದು ನೆಲೆ ಕಾಣಿಸ್ತಿರುವ ಅವ್ರ ಹೆತ್ತವರಿಗಾಗಿ.. ನನ್ನ ಕೈಲಿ ಆಗೋದು ಇದಿಷ್ಟೇ.. ಅವ್ರ ಋಣ ತೀರಿಸಲು ಇದರಿಂದ ಸಾಧ್ಯವಾಗುವುದಾದರೆ.. ಇದು.. ನನ್ನಿಂದ ಒಂದು ಅಳಿಲು ಸೇವೆ.. ಅಷ್ಟೇ.. ಅವ್ರು ನನಗೆ ಮಾಡಿರುವ ಸಹಾಯಕ್ಕೆ, ನಾನು ಅವ್ರಿಗೇನು ಮಾಡಿದ್ರೂ ಕಮ್ಮಿನೇ.. ವಯಸ್ಸಾದವರಿಗೆ ಈಗ ಮಗನ ಆಸರೆ ಬೇಕಿದೆ. ನೆಲೆಯಲ್ಲಿ ನಿಂತು ಇದನ್ನೆಲ್ಲಾ ಮಾಡ್ತಿದ್ದೇನೆ. ಇದಕ್ಕೆ ಹೆಚ್ಚಿನ ಅರ್ಥವನ್ನು ನೀವು ಕೊಡಬೇಕಾಗಿಲ್ಲ..! ಅಪೂರ್ವ ಸ್ಪಷ್ಟವಾಗಿ ತನ್ನ ನಿಲುವನ್ನು ಸಮರ್ಥಿಸಿಕೊಂಡಾಗ ತಾನೆಣಿಸಿದಂತೇನೂ ಇಲ್ಲವೆನಿಸಿ ಆದರ್ಶನ ಮನಸ್ಸು ತಿಳಿಯಾಗಿತ್ತು.

'ಸರಿ.. ನಾನು.. ಕೌನ್ಸಿಲರ್ ಅನ್ನು ಹುಡುಕಿ ನಿಮ್ಗೆ ಕರೆ ಮಾಡ್ತೀನಿ.'ಎಂದ.

ಸೂರ್ಯನನ್ನು ಕೌನ್ಸಿಲರ್ ಬಳಿ ಕರೆದೊಯ್ಯಲು ಹೇಗೆ ಒಪ್ಪಿಸುವುದೆಂಬ ಚಿಂತೆ ಅಪೂರ್ವಳಲ್ಲಿ ಶುರುವಾಗಿತ್ತು.

## ಅಧ್ಯಾಯ 14

ಈ ತುಮುಲದಲ್ಲೇ ಒಂದು ವಾರ ಕಳೆದಿತ್ತು. ಸೂರ್ಯನ ಸ್ವಭಾವದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಅಪೂರ್ವ ಕೂಡಾ ತನ್ನ ಪಠ್ಯ ಚಟುವಟಿಕೆಗಳಲ್ಲಿ ವ್ಯಸ್ತಳಾದಳು. ಪ್ರತಿದಿನದ ನೋಟ್ಸ್‌ಗಳನ್ನು ಅಂದೇ ಓದಿ ಮನನ ಮಾಡಿಕೊಳ್ಳುವುದನ್ನು ಚಿಕ್ಕಂದಿನಿಂದಲೂ ಮಾಡಿಕೊಂಡು ಬಂದು ಅಭ್ಯಾಸವಾದ್ದರಿಂದ ಈ ಇಂಜಿನಿಯರಿಂಗ್‌ನಲ್ಲಿ ಹಲವಾರು ವಿಷಯಗಳಿದ್ದರಿಂದ ಓದಿನ ವ್ಯಾಪ್ತಿಯೂ ಹೆಚ್ಚಿತ್ತು. ಪ್ರಭಾಕರರಾಯರ ಆಸ್ಪತ್ರೆ ವಾಸ, ಊರಿಂದ ಬಂದಿದ್ದ ಚಿಕ್ಕಮ್ಮನ ಸಂಸಾರದ ಸತ್ಕಾರದಿಂದ ಕೆಲವು ದಿನಗಳು ಬಾಕಿ ಇದ್ದ ನೋಟ್ಸ್‌ಗಳನ್ನು ಬರೆದು ಅಭ್ಯಸಿಸುವುದಿತ್ತು. ವಾರ ಕಳೆದ ಬಳಿಕ ಆದರ್ಶ, ಅಪೂರ್ವಳಿಗೆ ಕರೆ ಮಾಡಿದ್ದ. 'ಏನಾಯ್ತು... ನಿಮ್ಮ ಕೌನ್ಸಿಲಿಂಗ್ ವಿಷಯ?'

ಅಪೂರ್ವಳ ಮನಸ್ಸಿನಿಂದ ಆ ವಿಷಯ ಹೆಚ್ಚು ಕಮ್ಮಿ ಜಾರಿಯೇ ಹೋಗಿತ್ತು. ಅವಳಿಗೆ ಏನು ಹೇಳಬೇಕೆಂದು ತೋಚದೆ ನಿಂತಾಗ, 'ಒಳ್ಳೇ ಕೌನ್ಸಿಲರ್ ಸಿಕ್ಕಿದ್ದಾರೆ... ನೀವೇ ಕರ್ಕೊಂಡು ಹೋಗ್ತೀರೋ ಅಥವಾ ನಾನೂ ಬರ್ಬೇಕೋ..?' ಆದರ್ಶ ಯಾವ ಭಾವನೆಯಿಂದ ಕೇಳಿದನೋ ಅಪೂರ್ವಳಿಗೆ ಅರಿವಾಗಲಿಲ್ಲ. ಆದರೆ ಅವಳಲ್ಲಿ ಸೂರ್ಯನನ್ನು ಒಪ್ಪಿಸಿ ಅಲ್ಲಿಗೆ ಕರೆದೊಯ್ಯುವುದು ಸುಲಭದ ಮಾತಲ್ಲವೆನ್ನುವುದಂತೂ ಖಾತ್ರಿಯಾಗಿತ್ತು.

'ಸೂರ್ಯ ಅಲ್ಲಿಗೆ ಬರಲು ಒಪ್ತಾರಾ? ಅವ್ರನ್ನು ಹೇಗೆ ಒಪ್ಪಿಸುವುದು ಎಂಬುದೇ ಸಮಸ್ಯೆ..' ತನ್ನ ಅನುಮಾನವನ್ನು ವ್ಯಕ್ತಪಡಿಸಿದಳು.

'ನಿಮ್ಮ ಮೇಲೆ ಕೈ ಮಾಡಿ ಅಮಾನವೀಯವಾಗಿ ನಡ್ಕೊಂಡವನ ಬಗ್ಗೆ.. ನೀವು ಯಾಕೆ ಇಷ್ಟೊಂದು ಕಾಳಜಿ ತೋರಿಸ್ತೀರೋ ನನಗಂತೂ ಅರ್ಥವಾಗಲ್ಲ..! ಹೇಗೆ ಹೊಡೆದಿದ್ದ ನಿಮ್ಗೆ.. ಮನೇಲಿ ಕೂಡಿ ಹಾಕಿ ಹೋಗಿದ್ದ.. ಕಾರಲ್ಲಿ ಬರುವಾಗ ಕುತ್ತಿಗೆ ಹಿಚುಕಿದ್ದ.. ಮರೆತು ಹೋಯ್ತು ನಿಮ್ಗೆ..? ಅವ್ನ ಬಗ್ಗೆ ನನಗಂತೂ ಯಾವ ಆಸೆನೂ ಇಲ್ಲ. ಮೃಗ ಅವನು, ಮೃಗ ಯಾವತ್ತಿದ್ರೂ ಮನುಷ್ಯನಾಗ್ತನಾ?'

ಆದರ್ಶನ ಮಾತುಗಳು ಅಪೂರ್ವಳಿಗೆ ಹಿಡಿಸಲಿಲ್ಲ.

'ಆದರ್ಶ.. ಮೃಗ ಅಂತ ಕರೀತಿದ್ದೀರ.. ಇದು ಸರೀನಾ?'

'ಹೌದು ಅಪೂರ್ವ.. ಮೃಗನ ಗುಣವೇ ಅವ್ನ ರಕ್ತದಲ್ಲೇ ಬಂದಿದೆ.. ಇಲ್ದಿದ್ರೆ.. ಇಂಥ ಮನೆಯಲ್ಲಿ ಬೆಳೆದು.. ಚಿಕ್ಕ ವಯಸ್ಸಿನಲ್ಲೇ ಕೊಲೆ ಮಾಡೋದು ಅಂದ್ರೆ..! ಆ ಸ್ವಭಾವ ಅವ್ನ ರಕ್ತದಲ್ಲೇ ಇದೆ.. ಅದಕ್ಕೆ ಮೃಗ ಅಂತ ಕರೆದೆ.. ಅದು ಯಾವತ್ತಿಗೂ ಬದಲಾಗದ ಸ್ವಭಾವ..' ಆದರ್ಶನ ಅಸಮಾಧಾನ ಅವನ ಮಾತುಗಳಲ್ಲೇ ತುಳುಕಾಡುತ್ತಿತ್ತು.

'ಆದರ್ಶ.. ಪ್ರತಿಯೊಬ್ಬರೂ ತಪ್ಪು ಮಾಡ್ತಾರೆ.. ಅದನ್ನು ತಿದ್ದಿಕೊಳ್ಳಲು ಒಂದು ಅವಕಾಶ ಕೊಡಬೇಕು ಅನ್ನೋದು ನನ್ನ ಅಭಿಪ್ರಾಯ.. ಮನೆಗೆ ಬಂದ